## ಪ್ರಧಾನ ಸಿವಿಲ್ ನ್ಯಾಯಾಲಯ ಮತ್ತು ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಚಿಂಚೋಳಿ

***ಸಿ.ಸಿ.ನಂ.19/2025***

**ಫಿರ್ಯಾಧಿದಾರಃ** ಕರ್ನಾಟಕ ಸರ್ಕಾರದ ಪರವಾಗಿ ಅಬಕಾರಿ ಪೋಲಿಸ

// ವಿರುದ್ಧ //

**ಆರೋಪಿತರುಃ 1.** ಜಗಪ್ಪ ಮತ್ತು ಇನ್ನೋಬ್ಬ

ದೋ ಷಾ ರೋ ಪ ಣೆ

ನಾನು **ಶ್ರೀ ದತ್ತುಕುಮಾರ ಜವಳಕರ. B.B.A. L.L.B (Hons) L.L.M.** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ಚಿಂಚೋಳಿ**,** ಈ ಕೆಳಕೆಂಡ ಆರೋಪಿ

| | |
|---|---|
| 1. | ಜಗಪ್ಪ ತಂದೆ ಹಣಮಂತ, 33 ವರ್ಷ. |
| 2. | ಹಣಮಂತ ತಂದೆ ನಾರಾಯಣ, 25 ವರ್ಷ.<br>ಇಬ್ಬರ ವಾಸಃ ಗರಗಪಳ್ಳಿ ಗ್ರಾಮ, ತಾಃ ಚಿಂಚೋಳಿ. |

**ಆದ ನಿಮ್ಮ ವಿರುದ್ಧ ದೋಷಿಸುವ ದೋಷಾರೋಪಣೆ ಎನೆಂದರೆ,**

ದಿನಾಂಕಃ 15-04-2024 ರಂದು ಮುಂಜಾನೆ 10-45 ಗಂಟೆ ಸುಮಾರಿಗೆ ಚಿಂಚೋಳಿ ಪೋಲಿಸ ಠಾಣಾ ವ್ಯಾಪ್ತಿಯಲ್ಲಿ ಬರುವ ಸುಲೇಪೇಟ ನಿಂದ ದಸ್ತಾಪೂರ ಹೋಗುವ ಮುಖ್ಯ ರಸ್ತೆಯ ಮೇಲೆ ದ್ವಿಚಕ್ರ ವಾಹನದಲ್ಲಿ ಆರೋಪಿ ನೀನು ಯಾವುದೇ ಅಧಿಕೃತ ಪರವಾನಿಗೆ ಪಡೆಯದೆ ಅನಧಿಕೃತವಾಗಿ ಕಾನೂನು ಬಾಹಿರವಾಗಿ 90 m.l ನ 48 Original Choice Tetra ಪೌಚಗಳು ಮತ್ತು 650 m.l ನ 12 King Fisher Strong ಬೀಯರ ಬಾಟಲಗಳು ಮದ್ಯ ಸಾಗಾಟ ಮಾಡುತ್ತಿದ್ದ ಕಾರಣ ಆರೋಪಿ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.32 ರಡಿಯಲ್ಲಿ ಶಿಕ್ಷಾಹರ್ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು.

2. ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿ ನೀನು ಮದ್ಯವನ್ನು ಸಕ್ಷಮ ಪ್ರಾಧಿಕಾರದಿಂದ ಯಾವುದೇ ಪರವಾನಗಿ/ಅನುಮತಿಯನ್ನು ಪಡೆಯಡದೆ ನಿಗದಿತ ಪ್ರಮಾಣವನ್ನು ಮೀರಿದ ಮದ್ಯವನ್ನು ಪರವಾನಗೆ ಇಲ್ಲದೆ ಹೆಚ್ಚಿನ ಲಾಭಗಳಿಸುವ ಉದ್ದೇಶದಿಂದ ಸಾರ್ವಜನಿಕರಿಗೆ ಅಕ್ರಮವಾಗಿ ಮಾರಟ ಮಾಡುವ ಕಾರಣ, ಆರೋಪಿ ನೀನು ಕರ್ನಾಟಕ ಅಬಕಾರಿ ಕಾಯ್ದೆ ಕಲಂ.38-ಎ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯಾ ಎಂದು, ನಿನ್ನ ಮೇಲೆ ಆರೋಪಣೆ ಇರುತ್ತದೆ.

ನೀನು ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ಪ್ರಶ್ನೆ-1: ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿತೆ?

ಉತ್ತರಃ ಅರ್ಥವಾಯಿತು

ಪ್ರಶ್ನೆ-2: ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಎದುರಿಸವಿರೊ?

ಉತ್ತರಃ ವಿಚಾರಣೆಯಾಗಬೇಕು

ದಿನಾಂಕಃ 21.07.2025.
ಸ್ಥಳ : ಚಿಂಚೋಳಿ

(ಶ್ರೀ ದತ್ತಕುಮಾರ ಜವಳಕರ)
ಪ್ರ.ದ.ನ್ಯಾ.ದಂಡಾಧಿಕಾರಿ,
ಚಿಂಚೋಳಿ.